

## ನಿರ್ವಹಣೆ ಹೇಗೆ?

- ಲೆದರ್ ಉಡುಪುಗಳನ್ನು ಆದಷ್ಟು ಬಿಸಿಲು ಬಾರದ ಜಾಗದಲ್ಲಿ ಇರಿಸುವುದು ಸೂಕ್ತ. ಬಿಸಿಲಿನಿಂದ ಅದು ಬಣ್ಣ ಕಳೆದುಕೊಳುತ್ತದೆ.
- ಈ ಉಡುಪುಗಳನ್ನು ಅತ್ಯಂತ ಸೂಕ್ತವಾಗಿ ನಿರ್ವಹಣೆ ಮಾಡಿದರೆ ಅದು ದೀರ್ಘ ಕಾಲ ಬಾಳಿಕೆ ಬರುತ್ತದೆ.
- ಲೆದರ್ ಉಡುಪುಗಳು ನೀರಿನಲ್ಲಿ ಒದ್ದೆಯಾದರೆ ಅದನ್ನು ನೆರಳಿನಲ್ಲಿ ಒಣಗಿಸಬೇಕು. ಒಣ ಬಟ್ಟೆಯಿಂದ ಒರೆಸಿದರೂ ಆಗಬಹುದು. ಇದನ್ನು ಒಣಗಿಸಲು ಯಾವುದೇ ಶಾಖದ ಉಪಕರಣಗಳನ್ನು ಉಪಯೋಗಿಸಬಾರದು. ಇದರಿಂದ ಲೆದರ್ ಮುದುರಿಕೊಂಡು ಬಿಡುತ್ತದೆ.
- ಲೆದರ್ ಉಡುಪುಗಳ ಮೇಲೆ ಯಾವುದೇ ಕಲೆ ಕಾಣಿಸಿಕೊಂಡರೆ ಅದನ್ನು ಮನೆಯಲ್ಲಿಯೇ ವಾಷ್ ಮಾಡಬಾರದು. ತಜ್ಞರ ಸಲಹೆ ಪಡೆಯಬೇಕು.

ಈ ಲೆದರ್ ಮೆಟೀರಿಯಲ್‌ನಲ್ಲಿಯೇ ಸಾಕಷ್ಟು ವೆರೈಟಿ ಉಡುಪುಗಳನ್ನು ತಯಾರಿಸಿ ಮಾರುಕಟ್ಟೆಗೆ ತಂದಿದ್ದಾರೆ. ಈ ಉಡುಪುಗಳು ಇಂದಿನ ಯುವತಿಯರ ಹಾಟ್ ಫೇವರೆಟ್ ಆಗಿದೆ. ಈ ಮೊದಲು ಲೆದರ್ ಉಡುಪುಗಳು ಆಫೀಸ್ ವೇರ್, ಔಟಿಂಗ್ ಹಾಗೂ ಪಾರ್ಟಿಗಳಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಇದೀಗ ವಿನ್ಯಾಸಕಾರರ ನವೀನ ಪ್ರಯೋಗವೆಂದರೆ ಲೆದರ್ ಮೆಟೀರಿಯಲ್‌ನಲ್ಲಿ ತಯಾರಾಗುವ ಲೆಹಂಗಾ, ಟಾಪ್, ಗೌನ್‌ಗಳ ವಿನ್ಯಾಸ ಆಧುನಿಕ ಮನೋಭಾವದ ಯುವತಿಯರನ್ನು ಮೋಡಿ ಮಾಡಿವೆ.

ಚರ್ಮದ ಬೈಕರ್ ಜಾಕೆಟ್ ಕೂಡ ಸದ್ಯಕ್ಕೆ ಟ್ರೆಂಡ್‌ನಲ್ಲಿರುವ ಲೆದರ್ ವೇರ್. ಸಾಕಷ್ಟು ಬಣ್ಣಗಳಲ್ಲಿ ಸಿಗುವ ಈ ಬೈಕರ್ ಜಾಕೆಟ್‌ಗಳನ್ನು ಲಾಂಗ್ ಸ್ಕರ್ಟ್‌ಗಳ ಜೊತೆಗೆ 'ಮಿಕ್ಸ್ ಅಂಡ್ ಮ್ಯಾಚ್' ಮಾಡಿ ಧರಿಸಬಹುದು. ಎಥ್ನಿಕ್ ಉಡುಪುಗಳನ್ನು ಬಯಸುವ ಯುವತಿಯರು ಕೂಡ ಇದನ್ನು ಒಮ್ಮೆ ಬಳಸಿ ನೋಡಬಹುದು.

ಈ ತರಹದ ಜಾಕೆಟ್‌ಗಳು ಒಂದು ವಿಶಿಷ್ಟ ಲುಕ್ ನೀಡುತ್ತವೆ.

ಜೀನ್ಸ್ ಪ್ಯಾಂಟ್, ಡೆನಿಮ್ ಪ್ಯಾಂಟ್‌ಗಳ ಮೇಲೂ ಈ ತರಹದ ಜಾಕೆಟ್‌ಗಳನ್ನು ಧರಿಸಿ ಎಲ್ಲರ ಆಕರ್ಷಣೆಯ ಕೇಂದ್ರವಾಗಬಹುದು. ಲೆದರ್ ಉಡುಪುಗಳಲ್ಲಿ ನವೀನತೆಯನ್ನು ತರುವ ನಿಟ್ಟಿನಲ್ಲಿ ಉಡುಪು ವಿನ್ಯಾಸಕಾರರು ಇದೀಗ ಲೆದರ್ ಮೆಟಿರಿಯಲ್‌ಗಳ ಮೇಲೆ ಕಸೂತಿ ಕಲೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವುಗಳಲ್ಲಿ ಮುಖ್ಯವಾಗಿ ಬ್ರೈಡಲ್‌ವೇರ್ ಲೆಹೆಂಗಾಗಳು ಸುಂದರ ಲುಕ್ ಕೊಡುತ್ತವೆ. ಮದುವೆ ಸಮಾರಂಭಗಳಲ್ಲಿ ಸಾಂಪ್ರದಾಯಿಕ ಉಡುಪುಗಳನ್ನು ಧರಿಸಲು ಇಷ್ಟಪಡದವರು ಇದೀಗ ಎಂಬ್ರಾಯಿಡರಿ ವರ್ಕ್ ಮಾಡಿರುವ ಲೆದರ್ ಲೆಹೆಂಗಾಗಳನ್ನು ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಅದರಲ್ಲೂ ಬ್ಲಾಕ್ ಲೆದರ್ ಲೆಹಂಗಾದ ಮೇಲೆ ಗೋಲ್ಡನ್ ಇಲ್ಲವೇ ಸಿಲ್ವರ್ ಎಂಬ್ರಾಯ್ಡರಿ ವರ್ಕ್ ಇದೀಗ ಟ್ರೆಂಡಿಯಾಗಿದ್ದು ಯುವತಿಯರ ಹಾಟ್ ಫೇವರೆಟ್ ಎನಿಸುತ್ತಿವೆ.

## ಪುರುಷರ ಆ್ಯಂಕಲ್ ಲೆಂತ್ ಲೆದರ್ ಪ್ಯಾಂಟ್



ಲೆದರ್‌ನಿಂದ ತಯಾರಿಸಿದ ಜಾಕೆಟ್, ಬೆಲ್ಟ್, ವ್ಯಾಲೆಟ್ ಪುರುಷರ ಮೆಚ್ಚು. ಇವೆಲ್ಲದರ ಜೊತೆಗೆ ಪುರುಷರ ಫ್ಯಾಷನ್‌ನ ಹೊಸ ಟ್ರೆಂಡ್ ಲೆದರ್‌ನಲ್ಲಿ ತಯಾರಿಸಿದ ಆ್ಯಂಕಲ್ ಲೆಂತ್ ಪ್ಯಾಂಟ್. ನೋಡಲು ಪೆನ್ಸಿಲ್ ಕಟ್ ಪ್ಯಾಂಟ್‌ನಂತೆ ಇರುವ ಇವು ಕಾಲಿನ ಕೀಲಿನ ಭಾಗಕ್ಕಿಂತ ಸ್ವಲ್ಪ ಮೇಲೆ ಇರುತ್ತವೆ. ಇಟಾಲಿಯನ್ ಸ್ಟೈಲ್ ಎನ್ನಲಾಗುವ ಆ್ಯಂಕಲ್ ಲೆಂತ್ ಪ್ಯಾಂಟ್ ಈ ಮುಂಚೆ ಜೀನ್ಸ್ ಪ್ಯಾಂಟುಗಳಲ್ಲಿ ಮಾತ್ರ ದೊರಕುತ್ತಿತ್ತು. ಆದರೆ ಈಗ ಲೆದರ್ ಸೇರಿದಂತೆ ಎಲ್ಲ ರೀತಿಯ ಪ್ಯಾಂಟುಗಳಲ್ಲೂ ಲಭ್ಯ.

ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸಿ ಅದರ ಮೇಲೊಂದು ಶರ್ಟ್ ಅದಕ್ಕೊಪ್ಪುವ ಲೆದರ್ ಜಾಕೆಟ್ ತೊಟ್ಟು ಕಚೇರಿಗೆ ಹೋಗುವವ ಪುರುಷರು ಕೂಡ ಫ್ಯಾಷನ್ ಮೋಡಿಗೆ ಆತುಕೊಂಡಿದ್ದಾರೆ.

ಬಾಲಿವುಡ್ ಸ್ಟಾರ್ ಮತ್ತು ಕ್ರೀಡಾ ತಾರೆಗಳು ಈ ಟ್ರೆಂಡ್‌ಗೆ ಮಾರು ಹೋಗಿದ್ದಾರೆ. ಲೆದರ್ ಅಲ್ಲದೆ ಕಾಟನ್, ಜೀನ್ಸ್, ಲಿನನ್ ಬಟ್ಟೆಗಳಲ್ಲಿ ಕೂಡ ಆ್ಯಂಕಲ್ ಲೆಂತ್ ಪ್ಯಾಂಟ್‌ಗಳು ಲಭ್ಯ. ಬಣ್ಣಗಳಲ್ಲಿ ಸಾಕಷ್ಟು ಆಯ್ಕೆ ಇರುವ ಈ ಪ್ಯಾಂಟ್‌ಗಳು ಯಾವ ಗಾತ್ರದವರಿಗೇ ಆದರೂ ಹೊಂದಿಕೆ ಆಗುತ್ತವೆ. ಲೆದರ್ ಪ್ಯಾಂಟ್ ಹಾಕಿದಾಗ ಲೆದರ್ ಶೂ ಅನ್ನೇ ಧರಿಸಿ. ಶೂ ಆಯ್ಕೆ ಪ್ಯಾಂಟಿನ ಬಣ್ಣಕ್ಕೆ ಪೂರಕವಾಗಿರಲಿ. ಬೂಟ್ ಸಹ ಧರಿಸಬಹುದು. ಪ್ಯಾಂಟ್ ಬಣ್ಣಕ್ಕೆ ವಿರುದ್ಧ ಬಣ್ಣದ ಶರ್ಟ್ ಇದ್ದರೆ ಸ್ಟೈಲಿಶ್ ಲುಕ್ ಬರುತ್ತದೆ.